ದಿನಾಂಕಃ **23.07.2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು : 2ನೇ ಎದುರುದಾರರ ಪರ ವಕೀಲರಿಂದ :**

ನಿಪಿ-19 ರ ಪ್ರಕರಣದಲ್ಲಿ ನನ್ನನ್ನು ಪಕ್ಷಗಾರರನ್ನಾಗಿ ನನ್ನ ತಾಯಿಯವರು ಮಾಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ಅದು ಜೀವನಾಂಶಕ್ಕಾಗಿ ಸಲ್ಲಿಸಿದ ದಾವೆ. ಪ್ರತಿವಾದಿಗಳು ವ್ಯವಸ್ಥಾ ಪತ್ರ ಮಾಡಿಕೊಂಡ ಬಗ್ಗೆ ನನಗೆ ನಂತರದಲ್ಲಿ ಗೊತ್ತಾಗಿರುತ್ತದೆ. ಸದರಿ ವ್ಯವಸ್ಥಾ ಪತ್ರ ಮಾಡುವಾಗ ನಾವು ಕೂಡ ಹಾಜರಿದ್ದೆವು ಎಂದರೆ ಸುಳ್ಳು. 3ನೇ ಎದುರುದಾರರು ಹೇಳಿದ ಕಾರಣ ನಾವು ಈ ಪ್ರಕರಣವನ್ನು ದಾಖಲು ಮಾಡಿರುತ್ತೇವೆಂದರೆ ಸರಿ. ಸಾಕ್ಷಿಯು ಮುಂದುವರೆದು ನಾವು ಹೆಣ್ಣು ಮಕ್ಕಳು ಮಾತನಾಡಿಕೊಂಡು ಈ ಪ್ರಕರಣವನ್ನು ದಾಖಲು ಮಾಡಿರುತ್ತೇವೆ ಎನ್ನುತ್ತಾರೆ. 7ನೇ ಪ್ರತಿವಾದಿಯವರ ವಾರಸುದಾರರಿಗೆ ಅವರಿಗೆ ಹೋಗಬೇಕಾದ ಭಾಗ ಕೊಡಲು ನನಗೆ ಅಭ್ಯಂತರವಿಲ್ಲ. ನನಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ವ್ಯವಸ್ಥಾ ಪತ್ರವನ್ನು ರದ್ದುಪಡಿಸಲು ನಾನು ಅರ್ಜಿ ಸಲ್ಲಿಸಿಲ್ಲ ಎಂದರೆ ಸಲ್ಲಿಸಿರಬಹುದು.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

**ಪ್ರಧಾನ ಹಿರಿಯ ಸಿಜೆ ಮತ್ತು**
**ಜೆ.ಎಂ.ಎಫ್.ಸಿ., ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**